**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 11.08.2025.**

<u>ಪಾಟೀ ಸವಾಲು ಃ ಪ್ರತಿವಾದಿ **3** ಮತ್ತು **4** ರವರ ಪರ ಶ್ರೀ. ಸಿ.ಎಸ್.ಎಸ್. ವಕೀಲರಿಂದ</u>

1. ನಾನು ಎಸ್.ಎಸ್.ಎಲ್.ಸಿ ಯಲ್ಲಿ ಅನುತ್ತೀರ್ಣನಾಗಿರುತ್ತೇನೆ. ನನಗೆ ವ್ಯವಸಾಯದ ವೃತ್ತಿ ಬಿಟ್ಟು ಬೇರೆ ಯಾವುದೇ ವೃತ್ತಿ ಇಲ್ಲ. ನಾನು ನನ್ನ ತಂದೆಗೆ ಹಿರಿಯ ಮಗ ಎಂದರೆ ಸರಿ. ನನ್ನ ವಿವಾಹವು 1977 ರಲ್ಲಿ ಆಗಿರುತ್ತದೆ. 3 ನೇ ಪ್ರತಿವಾದಿಯ ಗಂಡ, 4 ಮತ್ತು 5 ನೇ ಪ್ರತಿವಾದಿಗಳ ತಂದೆಯಾದ ಶ್ರೀ. ಶಂಕರೇಗೌಡರವರು ಅನುದಾನಿತ ಶಾಲೆಯ ಶಿಕ್ಷಕರಾಗಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. 1985 ರಲ್ಲಿ ಅವರು ಮೈಸೂರಿನ ವಿವೇಕಾನಂದ ಟ್ರಸ್ಟ್ ನಲ್ಲಿ ಉದ್ಯೋಗಕ್ಕೆ ಸೇರಿದಾಗಿನಿಂದ ಅವರು ಅಲ್ಲಿಯೇ ವಾಸವಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಊರಿಗೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿಯು ಎಲ್.ಐ.ಸಿ. ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಸಹ ಮೈಸೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. 9 ನೇ ಪ್ರತಿವಾದಿಯು ಲೋಕೋಪಯೋಗಿ ಇಲಾಖೆಯಲ್ಲಿ ಇಂಜಿನೀಯರ್ ಆಗಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. 10 ನೇ ಪ್ರತಿವಾದಿಯ ವಿವಾಹವು ಎಷ್ಟನೇ ವರ್ಷದಲ್ಲಿ ಆಯಿತು ಎಂದು ನನಗೆ ನೆನಪಿಲ್ಲ.

2. ನಿ.ಪಿ1 ರ ದಾಖಲೆಯ ಪ್ರಕಾರ ನನ್ನ ತಂದೆಗೆ 5 ಗ್ರಾಮಗಳಲ್ಲಿ ಜಮೀನು ವಿಭಾಗಕ್ಕೆ ಬಂದಿರುತ್ತದೆ. ನಿ.ಪಿ22 ರ ಪಹಣಿಯಲ್ಲಿರುವ ಖಾತೆದಾರರಾದ ಗೌಡಪ್ಪರವರು ನನಗೆ ದೊಡ್ಡಪ್ಪನಾಗಬೇಕು. ಅವರು ಈಗ ಮೃತಪಟ್ಟಿರುತ್ತಾರೆ. ಅವರ ಮಕ್ಕಳು ಜೀವಂತ ಇದ್ದಾರೆ. ಸಾಕ್ಷಿಯು ಮುಂದುವರೆದು ನೊಂದಾಯಿತ ಪಾಲು ಪಟ್ಟಿಯ ಪ್ರಕಾರ ನನ್ನ ತಂದೆ ಅದನ್ನು ಖಾತೆ ಮಾಡಿಸಿಕೊಂಡಿರಲಿಲ್ಲ. ಆ ಕಾರಣದಿಂದ ಅವರ ಹೆಸರಿನಲ್ಲಿ ಖಾತೆ ಇದೆ ಎಂದು ನುಡಿಯುತ್ತಾರೆ. ಗೌಡಪ್ಪರವರ ವಾರಸುದಾರರುಗಳನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ಸದರಿಯವರ ಹೆಸರಿನಲ್ಲಿರುವ ಖಾತೆಯನ್ನು ಪ್ರಶ್ನೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸ್ವಾಧೀನದಲ್ಲಿ ನಾನು ಮತ್ತು ನನ್ನ ತಂದೆ ಇದ್ದೇವು ಎಂದು ನುಡಿಯುತ್ತಾರೆ. ಪಹಣಿಯಲ್ಲಿ ನಾನು ಸ್ವಾಧೀನದಲ್ಲಿರುವ ಬಗ್ಗೆ ವ್ಯವಸಾಯಗಾರರ ಕಾಲಂನಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ಸರಿ.

3. ನಿ.ಪಿ26 ರಲ್ಲಿರುವ ಖಾತೆದಾರರಾದ ಜಯರಾಮೇಗೌಡರವರು ನನಗೆ ದೊಡ್ಡಪ್ಪನ ಮಗನಾಗಬೇಕು. ಅವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿ. ನಿ.ಪಿ28 ರ ಖಾತೆದಾರರಾದ ಕರೀಗೌಡರವರು ನನಗೆ ಅಜ್ಜನಾಗಬೇಕು. ನಾನು ನನ್ನ ತಂದೆಯಿಂದ ದಿನಾಂಕ 20.08.2011 ರಂದು ಯಡಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.42/1 ರಲ್ಲಿ 1 ಎಕರೆ 25 ಗುಂಟೆ ಜಮೀನನ್ನು ಖರೀದಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ಬೇರಯವರಿಗೆ ಮಾರಾಟ ಮಾಡಲು ಹೊರಟಿದ್ದರು, ಆ ಕಾರಣದಿಂದ ನಾನು ಸಾಲ ಮಾಡಿ ಖರೀದಿಸರುತ್ತೇನೆ, ನಂತರ ಸದರಿ ಜಮೀನನ್ನು ನಾನು 2017 ರಲ್ಲಿ ನನ್ನ ಹೆಂಡತಿಗೆ ಬಂದಿದ್ದ ಕ್ಯಾನ್ಸರ್ ಕಾಯಿಲೆಯ ಖರ್ಚಿಗೆ ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸದರಿ ಜಮೀನನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುತ್ತೇನೆ.

4. ನಾನು ಪ್ರಸ್ತುತ ದಾವೆಯಲ್ಲಿ ಯಡಹಳ್ಳಿ ಗ್ರಾಮದ ಸರ್ವೆ ನಂಬರ್ 48/2 ರಲ್ಲಿ 1 ಎಕರೆ 26 ಗುಂಟೆ ಜಮೀನನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಮದುವೆಯಾದ ನಂತರ ಅದನ್ನು ನನ್ನ ಹೆಂಡತಿಯ ಒಡವೆಗಳನ್ನು ಮಾರಾಟ ಮಾಡಿ ಯಡಹಳ್ಳಿಯ ರಾಮೇಗೌಡರವರಿಂದ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

5. ನಾನು ಮೊದಲನೇ ಮಗನಾಗಿದ್ದು, ನಮ್ಮ ಕುಟುಂಬದಲ್ಲಿ ಹೊಂದಾಣಿಕೆ ಆಗದ ಕಾರಣ ಮದುವೆಯಾದ ಮೂರು ವರ್ಷಕ್ಕೆ ನಾನು ಬೇರೆ ವಾಸ ಮಾಡಲು ಪ್ರಾರಂಭಿಸಿದ್ದೆ ಎಂದರೆ ಸರಿ. ನನ್ನ ತಂದೆಯು ನನ್ನ ಕುಟುಂಬದ ನಿರ್ವಹಣೆಗೆ ನನ್ನ ಹೆಸರಿನಲ್ಲಿ ಆಸ್ತಿಯನ್ನು ಖರೀದಿಸಿ ವಿಭಾಗದ ರೂಪದಲ್ಲಿ ನೀಡಿದ್ದರು ಎಂದರೆ ಸರಿಯಲ್ಲ. ದಿನಾಂಕ 20.08.2011 ರ ಕ್ರಯಪತ್ರದ ರೀತ್ಯಾವು ಸಹ ಜಮೀನನ್ನು ನನ್ನ ತಂದೆಯು ವಿಭಾಗ ರೂಪದಲ್ಲಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಉಳಿದ ಪ್ರತಿವಾದಿಗಳಿಗೂ ಸಹ ನನ್ನ ತಂದೆ ದಾನ, ಕ್ರಯ, ಇತ್ಯಾದಿಗಳ ರೂಪದಲ್ಲಿ ಅವರವರ ವಿಭಾಗದ ಹಕ್ಕನ್ನು ವಿಲೇ ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. ಕೃಷ್ಣೇಗೌಡರ ಹೆಂಡತಿ ನಂದಿನಿ ಎಂದರೆ ನನ್ನ ಹೆಂಡತಿಯ ತಂಗಿಯ ಮಗಳು ಎಂದರೆ ಸರಿ. ದಿನಾಂಕ 27.06.2017 ರಂದು ಯಡಹಳ್ಳಿ ಗ್ರಾಮದ ಸರ್ವೆ ನಂ.42/3 ರಲ್ಲಿ 1 ಎಕರೆ 25 ಗುಂಟೆ ಆಸ್ತಿಯನ್ನು ನಂದಿನಿರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಹೆಂಡತಿಗೆ ಮಾಡಿದ ವೈದ್ಯಕೀಯ ವೆಚ್ಚದ ಸಾಲವನ್ನು ತೀರಿಸಲು ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ಸದರಿ ಕ್ರಯಪತ್ರದಲ್ಲಿ ನಮೂದು ಇರುವುದಿಲ್ಲ. ಸದರಿ ಸ್ವತ್ತನ್ನು ಸಹ ನನ್ನ ತಂದೆ ನನಗೆ ವಿಭಾಗದ ರೂಪದಲ್ಲಿ ನೀಡಿದ್ದರು ಎಂದರೆ ಸುಳ್ಳು. ನಾನು ಯಾವುದೇ ರೀತಿ ಮಾರಾಟ ಮಾಡಿಲ್ಲ, ಪ್ರಸ್ತುತ ದಾವೆಯಲ್ಲಿ ಸದರಿ ಸ್ವತ್ತನ್ನು ಸೇರಿಸಬೇಕಾಗುತ್ತದೆ ಎಂದು ಸುಳ್ಳು ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನಂದಿನಿರವರ ನಡುವೆ ಯಾವುದೇ ರೀತಿಯ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸುಳ್ಳು. ಸದರಿ ನಂದಿನಿರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಮತ್ತು ಸದರಿ ಸ್ವತ್ತನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಕಾಲವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.